SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –10 ದಿನಾಂಕ : 18–09–2024

## ದಿನಾಂಕ: 18.09.2024 ರ ವಾರದ ಸಭೆಯ ವರದಿ

**ಭಾರತರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಹುಟ್ಟಿದ ದಿನಾಂಕವನ್ನು ಇಂಜಿನಿಯರ್ಸ್ ದಿನಾಚರಣೆಯನ್ನಾಗಿ ಸಂಭ್ರಮಿಸುವ ಪ್ರಯುಕ್ತ ದಿನಾಂಕ: 18.09.2024 ನಮ್ಮ ವಾರದ ಸಭೆಯಲ್ಲಿ ನಮ್ಮ ಕ್ಲಬ್‌ನ ಇಂಜಿನಿಯರುಗಳಿಗೆ ಗೌರವಾರ್ಪಣೆ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಗಳಾಗಿ ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರು ಹಾಗೂ ಶರಣ್ಯ ಸಂಸ್ಥೆಯ ಮುಖ್ಯಸ್ಥರೂ ಮತ್ತು ಇಂಜಿನಿಯರ್ ಆಗಿರುವ ರೊ. ಡಿ.ಎಲ್. ಮಂಜುನಾಥರವರು ಮುಖ್ಯ ಅತಿಥಿಗಳಾಗಿ ವೇದಿಕೆಯಲ್ಲಿದ್ದು ಸಂಸ್ಥೆಯ ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು ಮತ್ತು ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಉಪಸ್ಥಿತರಿದ್ದು, ಅಂದು ನಮ್ಮ ಕ್ಲಬ್‌ನ ಹೆಚ್ಚಿನ ಇಂಜಿನಿಯರ್ ಸದಸ್ಯರುಗಳು ಸಭೆಗೆ ಆಗಮಿಸಿ ನಮ್ಮ ಗೌರವಾರ್ಪಣೆಯನ್ನು ಸ್ವೀಕರಿಸಿ ಸಭೆಯನ್ನು ಯಶಸ್ವಿಗೊಳಿಸಿಕೊಟ್ಟರು.**










ಪ್ರಾರಂಭದಲ್ಲಿ ರೊ.ವೈ.ವಿ.ವೆಂಕಟರಮಣ ಜೋಯ್ಸ್‌ರವರು **"ಶ್ರೀಗಂಧ ನಾನಾಗಿ ಹುಟ್ಟುತಿದ್ದರೆ ಆಗ ನಿನ್ನ ಪಾದಾರ್ಚನೆಗೆ ಸವೆಯುತ್ತಿದ್ದೆ"** ಎಂಬ ಭಕ್ತಿಗೀತೆಯನ್ನು ಸುಶ್ರಾವ್ಯವಾಗಿ ಹಾಡಿ ಪ್ರಾರ್ಥಿಸಿದರು. ರೊ. ರೇಖಾ ಪಾಟೀಲ್‌ರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಪ್ರಕಟಣೆ ನೀಡಿದರು. ಇದೇ ಸಂದರ್ಭದಲ್ಲಿ ರೋಟರಿ ಸದಸ್ಯತ್ವ ಸೆಮಿನಾರ್‌ನಲ್ಲಿ ಭಾಗವಹಿಸಿದ ಸದಸ್ಯರಿಗೆ ಕಿಟ್‌ಗಳನ್ನು ವಿತರಿಸಲಾಯಿತು. ರೊ. ಸಿ.ಬಿ. ವೀರಣ್ಣರವರಿಂದ ಹಾಸ್ಯದ ಮಾತುಗಳು ಮೂಡಿ ಬಂದವು.

ನಮ್ಮ ಕ್ಲಬ್‌ನ ಇಂಜಿನಿಯರ್ ಸದಸ್ಯರಾದ ರೊ.ಪೀರ್ ಪಾಷರವರು ತಮ್ಮ ನೇತೃತ್ವದಲ್ಲಿ ನಿರ್ಮಾಣವಾಗುತ್ತಿರುವ ಶಿವಮೊಗ್ಗ ಜಿಲ್ಲೆಯ ಸಿಗಂದೂರು ಬಳಿಯಲ್ಲಿರುವ ಶರಾವತಿ ಹಿನ್ನೀರಿಗೆ ಸೇತುವೆಯ ನಿರ್ಮಾಣ ಕಾಮಗಾರಿಯ ಚಿತ್ರಣವನ್ನು ಹಾಗೂ ಈಗಾಗಲೇ ಆಗಿರುವ ಪ್ರಗತಿಯನ್ನು ವಿವರಿಸಿದರು. ಅದರ ಕೆಲವೊಂದು ವಿವರಗಳು ಈ ರೀತಿ ಇದೆ.

ಶರಾವತಿ ಅಣೆಕಟ್ಟಿನ ಮುಳುಗಡೆಯಿಂದಾಗಿ ಸರಿಯಾದ ಸಂಪರ್ಕವಿಲ್ಲದೆ ಹಿಂದುಳಿದ ಹೊಳೆಬಾಗಿಲು, ಸಿಂಗಧೂರು, ತುಮರಿ, ಕರೂರು, ಕಳಸವಳ್ಳಿ, ಬ್ಯಾಕೋಡು, ಸುಳ್ಳಳ್ಳಿ ಪ್ರದೇಶ ಹಾಗೂ ರಾಜ್ಯದ ಎರಡು ಪ್ರಮುಖ ದೇವಸ್ಥಾನಗಳಾದ ಶ್ರೀ ಸಿಗಂಧೂರು ಚೌಡೇಶ್ವರಿ ಮತ್ತು ಕೊಲ್ಲೂರಿನ ಶ್ರೀ ಮೂಕಾಂಬಿಕೆ ದೇವಸ್ಥಾನಗಳಿಗೆ ಸುತ್ತಿ ಬಳಸಿ ಹೋಗುವ ಅಥವಾ ಹಗಲು ವೇಳೆ ಲಾಂಚ್ ಮೂಲಕ ಶರಾವತಿ ಹಿನ್ನೀರನ್ನು ದಾಟಿ ಸಂಚರಿಸಬೇಕಾದ ಅನಿವಾರ್ಯತೆ ಈ ಭಾಗದ ಜನರಿಗೆ ಹಾಗೂ ದೇವಸ್ಥಾನಗಳಿಗೆ ಹೋಗುವ ಪ್ರವಾಸಿಗಳಿಗೆ ಇರುವುದನ್ನು ತಪ್ಪಿಸಿ ಸುಮಾರು 2.44 ಕಿ.ಮಿ. ಉದ್ದದ ಶರಾವತಿ ಹಿನ್ನೀರಿಗೆ ಸೇತುವೆ ನಿರ್ಮಾಣ ಮಾಡಿ ಸಂಪರ್ಕ ಕಲ್ಪಿಸಲು ಶರಾವತಿ ಹಿನ್ನೀರಿಗೆ ಕೇಬಲ್ ಆಧಾರಿತ ವಿನೂತನ ಸೇತುವೆ ನಿರ್ಮಾಣ ಮಾಡುವ ಯೋಜನಾ ವರದಿಯನ್ನು 2017 ರಲ್ಲಿ ತಯಾರಿಸಿ ಸಲ್ಲಿಸಲಾಗಿದ್ದು, ಸದರೀ ಸೇತುವೆ ನಿರ್ಮಾಣಕ್ಕಾಗಿ ಸಿಗಂದೂರು ದೇವಸ್ಥಾನ ಮತ್ತು ಶರಾವತಿ ಹಿನ್ನೀರಿನ ಮೂಲಕ ಹಾದು ಹೋಗುತ್ತಿದ್ದ ಜಿಲ್ಲಾ ಮುಖ್ಯರಸ್ತೆ ಸಾಗರದಿಂದ ಮರಕುಟುಕದವರೆಗಿನ 67.50 ಕಿ.ಮಿ. ಉದ್ಧದ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ 369 ಇ ಎಂದು ಮೇಲ್ದರ್ಜೆಗೇರಿಸಿ ದಿನಾಂಕ: 23.03.2018 ರಲ್ಲಿ ಘೋಷಣೆ ಮಾಡಿದ್ದು ನಂತರ ಕೆ.ಪಿ.ಸಿ.

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ : 25–09–2024 ಬುಧವಾರ** **ಸಂಜೆ 6:45**

**ಕೌಟುಂಬಿಕ ಸ್ನೇಹ ಮಿಲನ (Family Meet)**

**Theme: ಜ್ಞಾನವೇ ಶಕ್ತಿ (Knowledge is Power)**

**ಶಿಕ್ಷಕರಿಗೆ ಅಭಿನಂದನೆ**
**ಶಿಕ್ಷಕರಿಂದ ಮನರಂಜನೆ**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ










ಇಲಾಖೆಗೆ ಸೇರಿದ ಜಾಗದಲ್ಲಿ ಸೇತುವೆ ನಿರ್ಮಾಣ ಮಾಡಲು ನಿರಪೇಕ್ಷಾ ಪತ್ರವನ್ನು 15.11.2018 ರಲ್ಲಿ ಪಡೆದು ನಂತರ ಕಾಮಗಾರಿಗೆ ಅಗತ್ಯವಿದ್ದ 9.88 ಹೆಕ್ಟೇರ್ ವನ್ಯಜೀವಿ ಅರಣ್ಯ ಪ್ರದೇಶದ ಅನುಮೋದನೆಯನ್ನು ದಿನಾಂಕ: 23.01.2019 ರಂದು ವನ್ಯಜೀವಿ ಮಂಡಳಿಯ 52 ನೇ ಸಭೆಯಲ್ಲಿ ಪಡೆಯಲಾಗಿದ್ದು 4 ನೇ ಬಾರಿ 28.02.2019 ರಂದು ಎಸ್.ಎಫ್.ಸಿ. ಸಭೆಗೆ ಮಂಡಿಸಿ 423.15 ಕೋಟಿ ವೆಚ್ಚದ ಯೋಜನಾ ವರದಿಗೆ ಮಂಜೂರಾತಿ ಪಡೆಯಲಾಗಿದೆ. ಕಾಮಗಾರಿಯನ್ನು ದಿಲೀಪ್ ಬಿಲ್ಡ್‌ಕಾನ್, ಭೋಪಾಲ್, ಮಧ್ಯಪ್ರದೇಶ ಇವರಿಗೆ ನಿರ್ವಹಣೆಯೊಂದಿಗೆ ನೀಡಿದ್ದು 2019ರ ಡಿಸೆಂಬರ್ ತಿಂಗಳಿನಲ್ಲಿ ಕಾಮಗಾರಿ ಪ್ರಾರಂಭಿಸಲಾಗಿದೆ.

**ಸೇತುವೆಯ ಪ್ರಮುಖ ಲಕ್ಷಣಗಳು ಈ ಕೆಳಕಂಡಂತಿವೆ:**

- ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ದೇಶದಲ್ಲಿ ಮಂಜೂರಾದ 7 ನೇ ಕೇಬಲ್ ಆಧಾರಿತ ಸೇತುವೆಯಾಗಿದ್ದು ರಾಜ್ಯದಲ್ಲಿ ಪ್ರಥಮ ಸೇತುವೆಯಾಗಿರುತ್ತದೆ.
- ಸೇತುವೆಯ ಉದ್ದ 2.14 ಕಿ.ಮಿ. ಮತ್ತು 2 ಬದಿ 0.15 ಕಿ.ಮಿ. ಉದ್ದದ ಅಪ್ರೋಚ್ ಏರಿ ಇದ್ದು ಅಂಬಾರಗೊಡ್ಲು ಕಡೆ 1.05 ಕಿ.ಮೀ ಹಾಗೂ ಸಿಂಗಂಧೂರು ದೇವಸ್ಥಾನದ ಕಡೆ 2.97 ಕಿ.ಮೀ ಉದ್ದದರಸ್ತೆ ನಿರ್ಮಾಣ ಸಹ ಮಾಡಲಾಗುತ್ತದೆ.
- ಸೇತುವೆಯ ಒಟ್ಟು ಅಗಲ 16.0 ಮೀಟರ್ ಇದ್ದು ಇದರಲ್ಲಿ 11 ಮೀಟರ್ ಅಗಲದ ರಸ್ತೆ ಹಾಗೂ 2 ಬದೀ 1.5 ಮೀ ಅಗಲದ ಪುಟ್ಪಾತ್‌ಇರುತ್ತದೆ.
- ಸೇತುವೆಗೆ ಒಟ್ಟು 17 ಪಿಯರ್ ಮತ್ತು 2 ಅಬಟ್ಮೆಂಟ್ ಇದ್ದು ಇವುಗಳ ತಳಪಾಯ 1.80 ಮೀ ವ್ಯಾಸದ ಒಟ್ಟು 164 ಪೈಲ್ಸ್‌ಗಳ ಮತ್ತು ಪೈಲ್ ಕ್ಯಾಪ್‌ಗಳ ಮೂಲಕ ನಿರ್ಮಿಸಲಾಗಿರುತ್ತದೆ.
- ಸೇತುವೆಯ ಮಧ್ಯೆ ಎಕ್ಸ್ಟ್ರಾಡೋಸ್ಡ್ ಭಾಗದಲ್ಲಿ 740 ಮೀ ಉದ್ದದ ಸೇತುವೆಯನ್ನು 4 ಸ್ಪ್ಯಾನ್‌ಗಳಲ್ಲಿ (ಪಿ 5 ಟು ಪಿ9) ನಿರ್ಮಾಣ




ಮಾಡಲಾಗಿರುತ್ತದೆ. (104.5 + 3 + 177.00 + 104.50) 38.50 ಮೀ ಎತ್ತರದ ಪೈಲಾನ್ ಹಾಗೂ ಪ್ರತಿ ಪೈಲಾನ್‌ಗೆ 6 ಕೇಬಲ್ ಅಳವಡಿಸಿ ನಿರ್ಮಿಸಲಾಗುತ್ತಿದೆ.

- ಬಾಕಿ ಉಳಿದ ಭಾಗ (ಬ್ಯಾಲೆನ್ಸ್‌ಕ್ಯಾಂಟಿ ಲಿವರ್) = 3(90+135+135+90) +35 + 1385 ಮೀ ಎ1 – ಪ4 + 450 ಮೀ ಪಿ9 – ಪಿ 13 + 450 ಮೀ ಪಿ17 – ಎ2 + 35 ಮೀ
- ಸೇತುವೆಗೆ ಪೂರ್ವಭಾವಿ ಕಾಂಕ್ರೀಟ್‌ನ ವಿವಿಧ ಎತ್ತರದ 3.5 ಮೀ ಅಗಲದ 604 ಸೆಗ್ಮೆಂಟ್‌ಗಳನ್ನು ಜೋಡಿಸುವ ಮೂಲಕ ನಿರ್ಮಾಣ ಮಾಡಲಾಗುತ್ತಿದೆ.
- ಸೇತುವೆ ನಿರ್ಮಾಣದ ಶೇ 90 ರಷ್ಟು ಕೆಲಸಗಳು ಪೂರ್ಣಗೊಂಡಿದ್ದು ಬಾಕಿ ಉಳಿದ ಎಲ್ಲಾ ಕೆಲಸಗಳನ್ನು ಮೇ 2025ರ ಒಳಗೆ ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸಲು ಯೋಜಿಸಲಾಗಿರುತ್ತದೆ. ಎಂದು ರೊ.ಪೀರ್ ಪಾಶರವರು ರೋಟರಿ ಸಭೆಗೆ ಅರುಹಿದರು.




ಕ್ಲಬ್‌ನ ಮಾಜಿ ಸಹಾಯಕ ಗವರ್ನರ್ ರೊ.ಎಸ್. ದತ್ತಾತ್ರಿಯವರು ರೊ.ಪೀರ್ ಪಾಶರವರ ಸಾಧನೆ ಬಗ್ಗೆ ಮಾತನಾಡಿ, ರೊ. ಪೀರ್‌ಪಾಶರವರು ಶಿವಮೊಗ್ಗೆಯಲ್ಲಿ ನಡೆಸಿದ ಹಲವಾರು ಕಾಮಗಾರಿಗಳು, ಈಗಿನ ಸಿಗಂಧೂರು ಸೇತುವೆಯ ಕಾಮಗಾರಿಗಳಿಗೆ ಸುಮಾರು 100 ಬಾರಿ ದೆಹಲಿ ಸುತ್ತಿ ಸುಮಾರು 483 ಕೋಟಿಗಳ ಮಂಜೂರಾತಿ ತಂದಿದ್ದಾರೆ. ಅವರ ಕಾರ್ಯಕ್ಷಮತೆ ನಿಸ್ಪೃಹತೆ ಈ ತರಹೆಯ ಕಾಮಗಾರಿಗಳಲ್ಲಿನ ಬದ್ಧತೆ ಹಾಗೂ ನಿರ್ಮಾಣದಲ್ಲಿ ತೋರಿದ ಆಸಕ್ತಿ ಹಾಗೂ ಪ್ರಾಮಾಣಿಕತೆಗಳು ಸಮಗ್ರ ಶಿವಮೊಗ್ಗ ಜಿಲ್ಲೆಯ ಅಭಿವೃದ್ಧಿಯಲ್ಲಿ ಇವರ ಛಾಪು ಮೂಡಿಸಿದೆ. ಅವರಿಗೆ ಕೃತಜ್ಞತೆಯನ್ನೂ ಸಹ ತಿಳಿಸಿದರು.



ಅಂದಿನ ಮುಖ್ಯ ಅತಿಥಿಗಳಾದ ಮಾಜಿ ಅಧ್ಯಕ್ಷರಾದ ರೊ.ಡಿ.ಎಲ್. ಮಂಜುನಾಥ್‌ರವರು ಇಂಜಿನಿಯರ್ ವೃತ್ತಿಯಲ್ಲಿನ ಸವಾಲುಗಳು ಎಂಬ ವಿಷಯವಾಗಿ ಮಾತನಾಡಿದರು. ಬೇರೆ ಬೇರೆ ಕ್ಷೇತ್ರಗಳಲ್ಲಿನ ಕೆಲಸ ಮಾಡಿದ ಇಂಜಿನಿಯರ್‌ಗಳು ನಮ್ಮಲ್ಲಿದ್ದಾರೆ. ರೊ.ಪೀರ್ ಪಾಷಾರವರ ಸಾಧನೆಯ ಬಗ್ಗೆ ಮಾತನಾಡಿದ ರೊ.ಡಿ.ಎಲ್. ಮಂಜುನಾಥ್‌ರವರು ಸಿಗಂಧೂರು ಸೇತುವೆ ನಿರ್ಮಾಣದಲ್ಲಿ ಸುಮಾರು 150 ಅಡಿ ಉದ್ದದ ನೀರಿನ ಆಳದಲ್ಲಿ ಪಿಲ್ಲರ್‌ಗಳ ನಿರ್ಮಾಣ ದೊಡ್ಡ ಸವಾಲೇ ಸರಿ. ನೀರಿಗೆ ಸೇರಿದ ತಕ್ಷಣ ಗಟ್ಟಿಗೊಳ್ಳುವ ಸಿಮೆಂಟನ್ನು ಇಲ್ಲಿ ಬಳಸಬೇಕು. ನಂತರ ಮತ್ತೊಂದು ಪಿಲ್ಲರ್




ನಿರ್ಮಾಣ ಜೊತೆಗೆ ಅದರ ನಿರ್ವಹಣೆ ಹೀಗೆ ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದಾರೆ ಎಂದರು.

ನಮ್ಮ ದಿನ ನಿತ್ಯದ ಜೀವನದಲ್ಲಿ ಗಡಿಯಾರವಿರಬಹುದು, ಬಳಸುವ ಲೋಟ ಇರಬಹುದು, ಬಿಸಿ ನೀರು ಇರಬಹುದು ಜೀವನದ ಎಲ್ಲಾ ಅಂಶಗಳಲ್ಲಿ ಇಂಜಿನಿಯರಿಂಗ್ ಕೊಡುಗೆ ಇದೆ. ಜೀವನದಲ್ಲಿ ಅವೆಲ್ಲವೂ ಹಾಸುಹೊಕ್ಕಾಗಿದೆ ಎಂದು ಹಲವಾರು ಉದಾಹರಣೆಗಳೊಂದಿಗೆ ತಿಳಿಸಿದರು. ಅಲ್ಲದೇ ಅವೆಲ್ಲದರೊಂದಿಗೆ ಸಂಬಂಧವೂ ಇದೆ ಎಂದರು. ಇಂಜಿನಿಯರಿಂಗ್‌ನಿಂದ ದೇಶವನ್ನು ಕಟ್ಟುವ ಕೆಲಸವಾಗಿದೆ, ಉದಾಹರಣೆಗೆ ಸೇತುವೆ, ಅಣೆಕಟ್ಟು, ಜಲವಿದ್ಯುತ್ ಯೋಜನೆಗಳು ಸುರಂಗಗಳ ನಿರ್ಮಾಣ. ಇವೆಲ್ಲ ಕೆಲಸದಲ್ಲಿ ದಂದ್ವಗಳಿವೆ. ಆದರೂ ತಂತ್ರಜ್ಞಾನದಿಂದ ಕಾರ್ಯಗಳು ಮುಂದುವರೆದಿದೆ. ಚಂದ್ರಯಾನದಂತಹ ತಂತ್ರಜ್ಞಾನದಲ್ಲಿ ಪ್ರಧಾನ ಮಂತ್ರಿಗಳೂ ಜೊತೆಗಿದ್ದಾರೆ. ನಮ್ಮಲ್ಲಾಗಿರುವ ಸ್ಮಾರ್ಟ್ ಸಿಟಿ ನಿರ್ಮಾಣದಲ್ಲಿ ಇಂಜಿನಿಯರುಗಳ ಪಾತ್ರ ಮರೆಯುವಂತಿಲ್ಲ. ಇಲ್ಲಿಯೂ ದ್ವಂದ್ವಗಳೂ ಇವೆ. ಏಕೆಂದರೆ ಸ್ಮಾಟ್ ಸಿಟಿ ನಿರ್ಮಾಣದಲ್ಲಿ ವಾಸದ ಮನೆಗಳಲ್ಲಿ ಹಿಂಭಾಗದಲ್ಲಿ ಅಥವಾ ಮುಂಭಾಗದಲ್ಲಿ ಮನೆಯ ಅಳಿಯುವಿಕೆ ಒಂದು ಸವಾಲೇ ಸರಿ. ತುಂಬಾ ಚೆನ್ನಾದ ರಸ್ತೆಗಳು ನಿರ್ಮಾಣವಾಗಿವೆ. ಶೇ 75% ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿವೆ. ಇವೆಲ್ಲವೂ ಇಂಜಿನಿಯರಿಂಗ್‌ನ ಕೊಡುಗೆಯಾಗಿದೆ. ಆದರೆ ವಾಸ್ತವಿಕ ಚಿತ್ರಣಗಳು ಸವಾಲುಗಳೂ ಸಹ ಸಾಕಷ್ಟು ಇವೆ ಎಂದು ವಿವರಿಸಿದರು. ಉದಾಹರಣೆಗೆ ಆಗುಂಬೆಯಿಂದ ಸೋಮೇಶ್ವರದವರೆಗೆ ಸುರಂಗ ನಿರ್ಮಾಣಕ್ಕೆ ಮೇಗರವಳ್ಳಿಯಿಂದ ಸುರಂಗದ ಕೆಲಸ ಪ್ರಾರಂಭವಾಗುತ್ತದೆ ಆದರೆ ಇದಕ್ಕೆ ಪರಿಸರವಾದಿಗಳ ಅಡ್ಡಗಾಲು ಸವಾಲಾಗಿರುತ್ತದೆ. ಆದರೆ ಒಬ್ಬ ಅನಾರೋಗ್ಯದಿಂದ ಗಂಭೀರವಾಗಿರುವ ರೋಗಿಯನ್ನು ಆದಷ್ಟು ಶೀಘ್ರವಾಗಿ ಮಣಿಪಾಲದಂತಹ ಆಸ್ಪತ್ರೆಗಳಿಗೆ ತಲುಪಿಸಲು, ಲಾರಿಗಳು ಅಥವಾ ಬಸ್ಸುಗಳು ಸುತ್ತುಬಳಸಿ ಬರುವ ಬದಲು ಇದರಲ್ಲಿ ಬಂದಲ್ಲಿ ಸಮಯದ ಉಳಿತಾಯವೂ, ಉನ್ನತ ಮಟ್ಟದ ರಾಷ್ಟ್ರ ನಿರ್ಮಾಣ ಕಾರ್ಯಗಳು ಹಾಗೂ ಜನಗಳಿಗೆ ಅನುಕೂಲವಾಗುವುದಿಲ್ಲವೇನು? ಎಂದು ಪ್ರಶ್ನಿಸಿದರು. ಈಗಿನ ತಂತ್ರಜ್ಞಾನದಲ್ಲಿ ಸುರಂಗ ಕೊರೆಯಲು ದೊಡ್ಡ ಯಂತ್ರಗಳೇ ಬಂದಿವೆ. ಅವುಗಳ ಮೂಲಕ ಸುರಂಗ ನಿರ್ಮಾಣ ಅತ್ಯಲ್ಪ ಸಮಯದಲ್ಲೇ ಆಗುವುದು ಎಂದರು.

ಈಗ ಒಂದೊಂದು ವಿಭಾಗಕ್ಕೆ, ವಿಷಯಕ್ಕೆ ಒಂದೊಂದು ಎಂಜಿನಿಯರಿಂಗ್ ಕೋರ್ಸ್‌ಗಳಿವೆ. ಎಂಜಿನಿಯರ್‌ರವರುಗಳು ತಮ್ಮ ಜ್ಞಾನವನ್ನು ತಮ್ಮ ಕೆಲಸದಲ್ಲಿ ತುಂಬಾ ಆಳಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು. ಚಿಂತನೆಗಳನ್ನು ಮಾಡಬೇಕು. ಈ ಹಿಂದೆ ಸರ್.ಎಂ. ವಿಶ್ವೇಶ್ವರಾಯರವರು ಜೋಗವನ್ನು ನೋಡಿ ವಾಟ್ ಎ ವೇಸ್ಟ್‌ಆಫ್ ವಾಟರ್ ಎಂದರಂತೆ. ಆದರೆ ಇಂದಿನ ಇಂಜಿನಿಯರಿಂಗ್ ವಿಧಾನವೇ ಬೇರೆ ತರಹವೇ ಇದೆ. ಇಂದಿನ ದಿನಮಾನದಲ್ಲಿ ಜಲವಿದ್ಯುತ್ ಯೋಜನೆ ಸೂಕ್ತವಾಗಿದೆಯೇ? ಜೋಗದ ವಿದ್ಯುತ್ ದುಬಾರಿಯಾ? ಇವೆಲ್ಲಾ ಇಂದಿನ ದಿನಮಾನದಲ್ಲಿ ಎಂಜಿನಿಯರಿಂಗ್ ಸವಾಲುಗಳೇ.

ಈಗ ಸೋಲಾರ್ ಪವರ್‌ನ್ನು ಬಳಸಿಕೊಳ್ಳುವ ಕಾಲವಾಗಿದೆ. ಸುಮಾರು 250 ಕಿ.ಮೀ ಉದ್ದದ ಸೋಲಾರ್ ಪ್ಯಾನಲ್ ಅಳವಡಿಸಿರುವ ಪ್ರದೇಶಗಳನ್ನು ನೀವು ಕಾಣಬಹುದು. ವಿಂಡ್ ಪವರ್ ಜನರೇಶನ್‌ಗಳನ್ನು ನೋಡಬಹುದು. ಇದು ಇಂದಿನ ತಂತ್ರಜ್ಞಾನ. ಇಲ್ಲಿ ವಿದ್ಯುತ್ ಸಂಗ್ರಹ ಮತ್ತು ವಿತರಣೆ ಸವಾಲಾಗಿದೆ. ವೈದ್ಯಕೀಯ ವಿಭಾಗದಲ್ಲಿ ಕೃತಕ ಬುದ್ಧಿಮತ್ತೆಯಿಂದ ಕ್ಯಾನ್ಸರ್‌ನಂತಹ ಹಲವಾರು ರೋಗಗಳನ್ನು ಪತ್ತೆ ಹಚ್ಚಬಹುದು. ಇತ್ತೀಚೆಗೆ ರೋಟರಿ ನ್ಯೂಸ್‌ನಲ್ಲಿ ಬಂದ ಬರಹಗಳನ್ನು ತಿಳಿಸಿದರು. ಇವತ್ತಿನ ಇಂಜಿನಿಯರುಗಳು ತಯಾರು ಮಾಡಿದ ಯೋಜನೆಗಳನ್ನು ರಾಜಕಾರಣಿಗಳು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಅದಕ್ಕೆ ಅವರ ಸಹಕಾರವಿಲ್ಲದಿರುವುದು ಹಾಗೂ ಆ ಯೋಜನೆಗಳು ಸೋಲಾಗುವ ನಿಟ್ಟಿನಲ್ಲಿ ಯೋಚಿಸುತ್ತಾರೆ. ಎಂಜಿನಿಯರಿಂಗ್ ವಿಭಾಗದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ನಡೆದಿದೆ ತರಬೇತಿಗಳು ನಡೆಯುತ್ತಲೇ ಇರುತ್ತದೆ. ನಮ್ಮ ಈಗಿನ ಜೀವನಕ್ರಮಕ್ಕೆ ಹಾಗೂ ಮುಂದಿನ ಸಂಶೋಧನೆಗಳಿಗೆ ಎಂಜಿನಿಯರುಗಳು, ಅವರ ಸಂಶೋಧನೆಗಳು ಕಾರಣವಾಗುತ್ತದೆ ಎಂದರು.

ಮಾಜಿ ಸಹಾಯಕ ಗವರ್ನರ್ ರೊ.ಸುನೀತಾ ಶ್ರೀಧರ್‌ರವರು ಇಂಜಿನಿಯರುಗಳ ಗೌರವಾರ್ಪಣೆಗೆ ನಮ್ಮ ಕ್ಲಬ್‌ನ ಇಂಜನಿಯರುಗಳನ್ನು ವೇದಿಕೆಗೆ ಆಹ್ವಾನಿಸಿದರು. ಜೊತೆಗೆ ಬಿದಿರಿನ ಉಪಯೋಗ ಹಾಗೂ ಮಹತ್ವವನ್ನು ಸಾರಿದರು. ಬಿದಿರಿನ ಉಪಯೋಗದಲ್ಲಿ ಬಿದಿರು ಕೊಳಲಾಗುತ್ತದೆ, ತೊಟ್ಟಿಲಾಗುತ್ತದೆ, ಬಾಗಿನವಾಗುತ್ತದೆ ಹೀಗೆ ಹಲವಾರು ಉಪಯೋಗಗಳನ್ನು ತಿಳಿಸುತ್ತಾ ಬಿದಿರು ಕೊನೆಯಲ್ಲಿ ಚಟ್ಟವಾಗುತ್ತದೆ ಎಂದು ತಿಳಿಸುತ್ತಾ ಅದರ ಉಪಯೋಗದ ಬಗ್ಗೆ ಮಾಹಿತಿ ನೀಡಿ, ನಮ್ಮ ಕ್ಲಬ್ ಈ ಕೆಳಕಂಡ ಇಂಜಿನಿಯರುಗಳನ್ನು ವೇದಿಕೆಗೆ ಆಹ್ವಾನಿಸಿದರು ಮತ್ತು ಇಂದು ವಿಶ್ವ ಬಿದಿರಿನ ದಿನ, ನಟ ವಿಷ್ಣುವರ್ಧನರ ಜನ್ಮದಿನ ಮತ್ತು ಸರ್.ಎಂ. ವಿಶ್ವೇಶ್ವರಾಯರವರ ಜನ್ಮದಿನ ಎಂದರು.




*** ರೊ. ವೈ. ಗೋಪಾಲಕೃಷ್ಣ ಗುಪ್ತ ರೊ. ಲಕ್ಷ್ಮೀನಾರಾಯಣ ಭಟ್ * ರೊ. ಎ.ಮಂಜುನಾಥ್ * ರೊ. ಡಿ.ಎಲ್. ಮಂಜುನಾಥ್ * ರೊ.ಹೆಚ್.ಎಸ್. ಮೋಹನ್, * ರೊ. ಎನ್. ವಿ. ಭಟ್ * ರೊ. ಪೀರ್ ಪಾಷ * ರೊ. ವೀರಣ್ಣ ಸಿ.ಬಿ. * ರೊ. ಸಿ. ವಿಜಯಕುಮಾರ್ * ರೊ. ವಿಶ್ವಾಸ್ ಎಲಬುರ್ಗಿ * ರೊ.ಎಸ್.ಎನ್.ನಾಗರಾಜ್ ಇವರುಗಳನ್ನು ರೊ.ಎಸ್. ದತ್ತಾತ್ರಿ, ರೊ. ವೈ.ವಿ. ವೆಂಕಟರಮಣ ಜೋಯ್ಸ್, ರೊ. ಸುನೀತಾ ಶ್ರೀಧರ್, ರೊ. ಎನ್.ಜಿ. ಉಷಾ, ರೊ. ಕೆ. ಸೂರ್ಯನಾರಾಯಣ ಉಡುಪ, ರೊ. ಭಾರ್ಗವಿ ಭಟ್, ರೊ. ಮಲ್ಲಿಕಾ ಜೋಯ್ಸ್ ರವರುಗಳು ಸೇರಿ ನೆನಪಿನ ಕಾಣಿಕೆ ನೀಡಿ, ಶಾಲು ಹಾಕಿ ಗೌರವಿಸಿದರು. ರೊ. ಎಸ್. ದತ್ತಾತ್ರಿಯವರು ಇಂಜನಿಯರಗಳನ್ನು ಯಂತ್ರ ಸಂಸಾರ ಎಂದು ವಿವರ ನೀಡಿದರು. ಇದೇ ಸಂದರ್ಭದಲ್ಲಿ ರೊ. ಎನ್. ಜಿ. ಉಷಾರವರು ಇಂಜಿನಿಯರುಗಳಿಗೆ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು.**

ಕಾರ್ಯಕ್ರಮದ ಕೊನೆಯಲ್ಲಿ ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಸರ್ವರನ್ನು ವಂದಿಸಿದರು. ನಂತರ ರಾಷ್ಟ್ರಗೀತೆ ನಂತರ ರೊ.ವೈ.ವಿ.ವೆಂಕಟರಮಣ ಜೋಯ್ಸ್‌ರವರಿಂದ 'ಭಾರತ ಮಾತಾಕಿ ಜೈ' ಎಂಬ ಉದ್ಘೋಷದೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.




**Zonal review meeting was conducted on 13-9-2024. President Rtn. K. Suryanarayana Udpa & Secretary Rtn. N.G. Usha, Rtn. Veeranna A. Huggi, Rtn. Suneetha Sridhar, Rtn. N.S. Sridhar Participated.**



## ಸಂಪಾದಕೀಯ

### ಅನವಶ್ಯಕ ಮಾತನಾಡದಿರಿ

ಅಧ್ಯಯನದಲ್ಲಿ ತೊಡಗಿದ್ದ ಗುರುವಿನ ಬಳಿಗೆ ಶಿಷ್ಯ ಬಂದ. ಅವನಿಗೆ ತನ್ನ ಸಹಪಾಠಿಯ ಬಗ್ಗೆ ಹೇಳುವುದಿತ್ತು. 'ಗುರುಗಳೇ ಆ ಶ್ಯಾಮ ಇದ್ದಾನಲ್ಲಾ, ಅವನು ಒಂದು ಮಾತನ್ನು ಹೇಳುತ್ತಿದ್ದ' ಎಂದ. ಗುರುಗಳು ಅವನನ್ನು ನೋಡುತ್ತಾ 'ಹೌದೇ, ಬಾ ಇಲ್ಲಿ ಕುಳಿತುಕೋ' ಎಂದರು. ಗುರುಗಳು ತನ್ನ ಮಾತುಗಳನ್ನು ಕೇಳುತ್ತಾರೆಂದು ಶಿಷ್ಯನು ಉತ್ಸಾಹದಿಂದ ಶ್ಯಾಮನ ಬಗ್ಗೆ ಹೇಳಲು ಆರಂಭಿಸಿದನು.

ಗುರುಗಳು ಅವನ ಉತ್ಸಾಹವನ್ನು ಮುರಿಯುವವರಂತೆ 'ಅವನಿಂದ ನಿನಗೇನಾದರೂ ತೊಂದರೆಯಾಯಿತೇ' ಎಂದು ಕೇಳಿದರು. 'ಇಲ್ಲ ಗುರುಗಳೇ ಆದರೆ, ಅವನು ಆಡುತ್ತಿದ್ದ ಮಾತು... ' ಎನ್ನುವಾಗ ಆ ಮಾತನ್ನು ಅರ್ಧಕ್ಕೆ ತುಂಡರಿಸುತ್ತಾ ' ಅವನು ಹೇಳಿದ್ದು ನಿನ್ನ ಬಗ್ಗೆಯಾ' ಎಂದು ಕೇಳಿದರು.

'ಇಲ್ಲ ಗುರುಗಳೇ' ಎಂದ ಶಿಷ್ಯ. ಗುರುಗಳು ದೀರ್ಘವಾಗಿ ಉಸಿರು ತೆಗೆದುಕೊಳ್ಳುತ್ತಾ 'ಹಾಗಾದರೆ ಅದು ನನ್ನ ಬಗ್ಗೆಯೇ ಇರಬೇಕು' ಎಂದರು. ಶಿಷ್ಯನಿಗೆ ಇನ್ನೂ ಬೇಸರವಾಯಿತು.

'ಛೇ ಇಲ್ಲ ಗುರುಗಳೇ ಅದು ನಿಮ್ಮ ಬಗ್ಗೆಯೂ ಅಲ್ಲ. ನನ್ನ ಬಗ್ಗೆಯೂ ಅಲ್ಲ' ಎಂದ ಶಿಷ್ಯ.

'ಸರಿ ನಮ್ಮಿಬ್ಬರ ಬಗ್ಗೆಯೂ ಅಲ್ಲ ಎಂದರೆ ಆ ಮಾತುಗಳಿಂದ ಯಾರಿಗಾದರೂ ಮನಸ್ಸಿಗೆ ನೋವಾಗುತ್ತಿದೆಯೇ' ಮರುಪ್ರಶ್ನೆ ಗುರುಗಳದು. ಶಿಷ್ಯ ಮತ್ತಷ್ಟು ತಗ್ಗಿದ, 'ಇಲ್ಲ ಗುರುಗಳೇ' ಎಂದ. ಮತ್ತೆ ಗುರುಗಳು 'ಅದರಿಂದ ಯಾರಿಗಾದರೂ ಉಪಯೋಗವಾಗುತ್ತಿದೆಯೇ' ಎಂದು ಕೇಳಿದರು. ಅದಕ್ಕೂ ಶಿಷ್ಯ 'ಇಲ್ಲ' ಎಂದ.

'ಹಾಗಿದ್ದರೆ ನಾವಿಬ್ಬರೂ ಶ್ಯಾಮನ ಬಗ್ಗೆ ಮಾತನಾಡುವುದರಲ್ಲಿ ಅರ್ಥವೇ ಇಲ್ಲ. ನಿರ್ದಿಷ್ಟವಾಗಿ ಯಾರಿಗೂ ಸಂಬಂಧಿಸದ, ಪ್ರಯೋಜನವೂ ಇಲ್ಲದ ಮಾತುಗಳಿಂದ ನಿನ್ನ ಅಧ್ಯಯನದ ಸಮಯದಲ್ಲಿ ವ್ಯರ್ಥ ಮಾಡಿಕೊಂಡೆ ಮತ್ತು ನನ್ನದನ್ನು ಕೂಡಾ. ಇಂಥಾ ವಿಷಯಗಳಿಗೆ ಮನಸ್ಸು ಕೊಡುವ ಬದಲು ಆ ಸಮಯವನ್ನು ಸದುಪಯೋಗ ಮಾಡಿಕೋ' ಎನ್ನುತ್ತಾ ತಮ್ಮ ಅಧ್ಯಯನದಲ್ಲಿ ತೊಡಗಿಕೊಂಡರು.

ಉಪಯುಕ್ತ ಮಾತುಗಳಿಗೆ ಮಾತ್ರವೇ ಮಹತ್ವ ಇರುವುದೆಂದು ಅರಿತ ಶಿಷ್ಯ ಮತ್ತೆಂದೂ ವ್ಯರ್ಥ ಮಾತುಗಳನ್ನು ಆಡಲಿಲ್ಲ.

ಇದನ್ನೇ ನಾವು ರೋಟರಿಯಂತಹ ಸಂಘಟನೆಯ ಕಾರ್ಯ ಕ್ರಮಗಳಲ್ಲಿ ಅಳವಡಿಸಿಕೊಳ್ಳುವ ಮೂಲಕ ಶಿಸ್ತು ಕಾಯ್ದುಕೊಳ್ಳಬಹುದು.

● ರೊ. ಎಂ. ಮಾಧವಾಚಾರ್

## ROTARY INFORMATION

### ROTARY CODE OF CONDUCT

*As Rotarian, I Will,*

1. *Act with integrity and high ethical standards in my personal and professional life.*
2. *Deal fairly with others and treat them & their occupations with respect.*
3. *Use my professional skills through Rotary to mentor young people, help those with special needs & improve quality of life in community.*
4. *Avoid behaviour that reflects adversely on Rotary & other Rotarians.*
5. *Not seek special business or professional advantage from other Rotarians.*




ಪ್ರಜಾಪ್ರಭುತ್ವ ದಿನಾಚರಣೆಯ ಸಂದರ್ಭದಲ್ಲಿ ನಮ್ಮ ಕ್ಲಬ್‌ನ ರೊ. ವೀರಣ್ಣ ಎ. ಹುಗ್ಗಿ, ರೊ. ವಿಜಯಕುಮಾರ್ ಹಾಗೂ ಇತರ ಸದಸ್ಯರು ಭಾಗವಹಿಸಿದ್ದರು.




ರೊ. ಬಿ.ಎಂ. ಗೋಪಾಲ್‌ರವರ ಜನ್ಮದಿನದಂದು ಅವರ ಮನೆಗೆ ತೆರಳಿ ನಮ್ಮ ಕ್ಲಬ್ ವತಿಯಿಂದ ಶುಭಾಶಯ ಕೋರಲಾಯಿತು.

### ನೂತನ ಸದಸ್ಯರ ಪರಿಚಯ...



Name: Rtn. **V. Srinivas.**
Spouse Name: **Nagaratna S.B.**
Profession: **Retired LIC Officer**
Children Name:
**Aravind S. & Abhilash S.**
Birthday Date : **30th March**
Wedding Anniversary: **5th July**
Mob.No.: 94805 05305
Proposed by : N.G.Usha




### ಚಿಂತನ

ಒಳ್ಳೆಯ ಗುಣ ಮನಸ್ಸಿನ ಆಸ್ತಿ
ಒಳ್ಳೆಯ ಪ್ರೀತಿ ಹೃದಯದ ಆಸ್ತಿ
ಒಳ್ಳೆಯ ಪುಸ್ತಕ ಜ್ಞಾನದ ಆಸ್ತಿ
ಒಳ್ಳೆಯ ನಗು ಆರೋಗ್ಯದ ಆಸ್ತಿ
ಒಳ್ಳೆಯ ಮಾನವೀಯತೆ ಸಮಾಜದ ಆಸ್ತಿ

– ರೊ. ಕೆ. ಸೂರ್ಯನಾರಾಯಣ ಉಡುಪ

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495